ಅದಕ್ಕೆ ಸಂಬಂಧಪಡುವುದಿಲ್ಲ. ನಾವು ಆರಿಸಸಿಬಂದವರೆ ಸುಮ್ಮನೆ ಕುಳಿತಿದ್ದೇವೆ ಆದರೆ ಅವರಿಗೇ ಹೆಚ್ಚಾಗಿಬಿಟ್ಟಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಇದು ಈ ರಾಜ್ಯದ ಎಲ್ಲರಿಗೂ ಸಂಬಂಧಪಟ್ಟಿದೆ.

ಅಧ್ಯಕ್ಷರು : ನೋಡಿ ಅವರು ಯಾವೊತ್ತು ಎದ್ದುನಿಂತು ಮಾತನಾಡಿಲ್ಲ. ಅವರ ಮಾತಿನ ಉದ್ದೇಶ ಏನೆಂದರೆ, ನಾವು ಅಲ್ಲಿಂದ ಬಂದವರು ನಮಗಿಂತ ಹೆಚ್ಚು ಕಾಳಜಿ ಅವರಿಗಿದೆ ಎಂದು ಅಷ್ಟೆ.....

(3) ಬೆಳಗಾವಿ ಜಿಲ್ಲೆಯಲ್ಲಿ ರೈತರು ಹೆಚ್ಚು ಕಬ್ಬು ಬೆಳದಿದ್ದುನ್ನು ಮಹಾರಾಷ್ಟ್ರಕ್ಕೆ ಸಾಗಿಸಲು ಪರವಾನಗಿ

ಶ್ರೀ ಚಂದ್ರಶೇಖರ್ ಸದಾಶಿವನಾಯಕ್ : ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕದಲ್ಲಿ ಅದರಲ್ಲೂ ಬೆಳಗಾವಿ ಜಿಲ್ಲೆಯಲ್ಲಿ ಅಧಿಕವಾಗಿ ಈ ವರ್ಷ ಕಬ್ಬನ್ನು ಬೆಳೆದದ್ದು ಎಲ್ಲರಿಗೂ ಗೊತ್ತಿರುವ ವಿಷಯ. ಸರ್ಕಾರಕ್ಕೆ ಹೆಚ್ಚುವರಿಯಾಗಿರುವ ಕಬ್ಬಿನ ಬಗ್ಗೆ ಮನವಿಯನ್ನು ಸಲ್ಲಿಸಿದಾಗ ಮಹಾರಾಷ್ಟ್ರಕ್ಕೆ ಸಾಗಿಸಲಿಕ್ಕೆ ನಾವು ಪ್ರಯತ್ನ ಪಡುತ್ತೇವೆ ಎಂದು ಹೇಳಿದ್ದರು, ವಿರೋಧಪಕ್ಷದವರು ಈಗಾಗಲೇ ಮಹಾರಾಷ್ಟ್ರಕ್ಕೆ ಹೋಗಿಬಂದಿದ್ದಾರೆ. ಆದರೆ ನಮ್ಮ ಸಚಿವರು ಏಕೆ ಹೋಗಿಲ್ಲ ಎಂದು ಜನ ಸುಮ್ಮನೆ ಕೇಳುತ್ತಿದ್ದಾರೆ. ಅದಕ್ಕೆ ಈ ಬೆಳಗಾವಿ ಜಿಲ್ಲಾ ಶಾಸಕರ ಒಂದು ನಿಯೋಗಳನ್ನು ಸಚಿವರ ನೇತೃತ್ವದಲ್ಲಿ ಏಕೆ ಕರೆದುಕೊಂಡು ಹೋಗಬಾರದು? ಈ ಕಬ್ಬಿನ ಸಮಸ್ಯೆಯನ್ನು ಏಕೆ ಬಗೆಹರಿಸಬಾರದು ಎಂಬ ಪ್ರಶ್ನೆಯನ್ನು ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಬಾಳಸಾಹೇಬ ಶ್ಯಾಮರಾವ್ ವಡ್ಡರ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಚಂದ್ರಶೇಖರ ನಾಯಕರವರು ಏನು ಕೇಳಿದರು ಅದೇ ಪ್ರಶ್ನೆಯನ್ನು ನಾನೂ ಕೂಡ ಕೇಳುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಜನ ರೈತರು ಕಷ್ಟಪಟ್ಟು ಬೆಳೆಸಿದ್ದಾರೆ. ರೈತರು ಬೆಳಸಿರತಕ್ಕಂಥ ಕಬ್ಬನ್ನು ಜಿಲ್ಲೆಯಲ್ಲಿರುವಂಥ ಕಾರ್ಖಾನೆಗಳಿಂದ ಅರೆಯಲಿಕ್ಕೆ ಆಗುತ್ತಾ ಇಲ್ಲ. ಪ್ರತಿವರ್ಷ ಈ ಕಬ್ಬನ್ನು ನಮ್ಮ ನೆರೆರಾಜ್ಯವಾದ ಮಹಾರಾಷ್ಟ್ರದಲ್ಲಿರುವಂಥ ಸಕ್ಕರೆ ಕಾರ್ಖಾನೆಗಳಿಗೆ ಸಾಗಿಸಲಾಗುತ್ತಿತ್ತು. ಈ ವರ್ಷ ಸರ್ಕಾರ ಯಾವುದೋ ಒಂದು ನಿರ್ಬಂಧವನ್ನು ಹಾಕಿ ಈ ರೈತರ ಕಬ್ಬನ್ನು ತೆಗೆದುಕೊಂಡು ಹೋಗದೆ ಇರುವುದರಿಂದ ರೈತರು ನಿಜವಾಗಿಯೂ ಕಂಗಾಲಾಗಿದ್ದಾರೆ. ಈ ಬಗ್ಗೆ ನಾವು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಬೆಳಗಾಂವ್‌ಗೆ ಬಂದಂಥ ಸಂದರ್ಭದಲ್ಲಿ ಹೇಳಿದೆವು ಆಗ ಅವರು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು ಆದರೆ ಆ ಕ್ರಮ ಇನ್ನೂ ಕೃತಿಯಲ್ಲಿ ಬಂದಿಲ್ಲ. ಅದಕ್ಕೆ ಮುಖ್ಯಮಂತ್ರಿಗಳಾಗಲಿ, ಅಥವಾ ಸಕ್ಕರೆ ಖಾತೆಯ ಸಚಿವರಾಗಲಿ, ಬೆಳಗಾಂ ಜಿಲ್ಲೆಯ ಶಾಸಕರ ಒಂದು ನಿಯೋಗವನ್ನು ತೆಗೆದುಕೊಂಡುಹೋಗಿ ಮಹಾರಾಷ್ಟ್ರ ಸರ್ಕಾರದ ಜೊತೆ ಚರ್ಚಿಸಿ ಈ ರೈತರ ಕಷ್ಟವನ್ನು ಪರಿಹಾರ ಮಾಡುವಂಥ ಕೆಲಸವನ್ನು ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಚಂದ್ರಶೇಖರ ಮಾಲ್ಲಿಕಾರ್ಜುನ ಮಾಮನಿ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಚಂದ್ರಶೇಖರನಾಯಕ್ ಮತ್ತು ಬಾಳಾಸಾಹೇಬ್ ವಡ್ಡರ್‌ರವರು ತಂದಂಥ ವಿಷಯವನ್ನು ಸಮರ್ಥಿಸುತ್ತಾ, ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಸಕ್ಕರೆ ಸಚಿವರನ್ನು ನಾನು ಅಭಿನಂದಿಸುತ್ತೇನೆ. ಅವರು ಮಹಾರಾಷ್ಟ್ರ ಸರ್ಕಾರದ ಸಚಿವರ ಹತ್ತಿರ ಹೋಗಿ ಭೇಟಿ ಮಾಡಿ ಮಾತುಕತೆಗಳನ್ನು ಆಡಿ ಬಂದಿದ್ದಾರೆ. ಆದರೂ ಅದು ಇಲ್ಲಿಯವರೆಗೂ ಫಲಕಾರಿಯಾಗಿಲ್ಲ. ಆದಷ್ಟು ಬೇಗ ಬೆಳೆದು ನಿಂತಂಥ ಕಬ್ಬನ್ನು ಏಕೆಂದರೆ ಇನ್ನು ಸ್ವಲ್ಪ ದಿವಸ ಕಳೆಯಿತು ಎಂದರೆ ಮಾರ್ಚ 8 ಕೊನೆಯವರೆಗೆ ಇದೇ ಪರಿಸ್ಥಿತಿ ಮುಂದುವರೆದರೆ ಕಬ್ಬನ್ನು ಸುಡುವಂಥ ಪರಿಸ್ಥಿತಿ ಬರುತ್ತದೆ. ಇದರಿಂದ ರೈತರ ಪರಿಸ್ಥಿತಿ ಕಷ್ಟ ಇದೆ, ಆದ್ದರಿಂದ ಆದಷ್ಟು ಬೇಗ ಕಬ್ಬನ್ನು ಸಾಗಾಣಿಕೆ ಮಾಡಲಿಕ್ಕೆ ಮತ್ತೊಮ್ಮೆ ಸಕ್ಕರೆ ಸಚಿವರಾಗಲಿ, ಮುಖ್ಯಮಂತ್ರಿಗಳಾಗಲಿ ಒಂದು ನಿಯೋಗದಲ್ಲಿ ತಮ್ಮಮುಖಾಂತರ ಅವರಿಗೆ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಸುಭಾಶ್ ಶ್ರೀಧರ್ ಜೋಶಿ (ನಿಪ್ಪಾಣಿ) : ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆಯಲ್ಲಿ ರೈತರಿಗೆ ಬಹಳ ಕಷ್ಟವಾಗುತ್ತಿದೆ. 15 ಲಕ್ಷ ಟನ್ ಕಬ್ಬು ಅಲ್ಲಿ ಒಣಗುತ್ತಿದೆ. Sir, in Belgaum district, the ryots are in very much trouble because 15 lakh tonnes of sugarcane is just burning and peopel are just in trouble. Therefore, I would request the Hon. Chief Minnister and the Sugar Minister to take a delegation of all the MLAs of Belgaum, Hubli and Dharwar district to the Hon. Chief Minister of Maharastra. Otherwise, this problem will not be solved. This is my humble request.

ಶ್ರೀ ಎಸ್.ಸಿ. ಮಾಳಗಿ (ಬಾಗೇವಾಡಿ) : ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಸಕ್ಕರೆ ಸಚಿವರು ಮಹಾರಾಷ್ಟ್ರಕ್ಕೆ ಹೋಗಿಬಂದು ಈ ಕಬ್ಬಿನ ಸಮಸ್ಯೆಯನ್ನು ನಿವಾರಿಸುತ್ತೇವೆ ಎಂದು ಹೇಳಿದ್ದರು. ಆದರೆ ಅವರು ಮಹಾರಾಷ್ಟ್ರಕ್ಕೆ ಹೋಗಿಬಂದರೂ ಕೂಡ ಈ ಸಮಸ್ಯೆಗೆ ಇನ್ನೂ ಪರಿಹಾರ ಕಂಡುಬರುತ್ತಿಲ್ಲ. ಏಕೆಂದರೆ ಈಗಾಗಲೇ ರೈತರು ಬೆಳೆದಂಥ ಕಬ್ಬಿನ ಪರಿಸ್ಥಿತಿ ಹೇಗಾಗಿದೆಯೆಂದರೆ ಅವರು ಬೆಳೆದಂಥ ಕಬ್ಬನ್ನು ಪುಕ್ಕಟ್ಟೆಯಾಗಿಯಾದರು ತೆಗೆದುಕೊಂಡು ಹೋಗಿಬಿಟ್ಟರೆ ಸಾಕಾಗಿದೆ. ಕಾರಣ ಆ ಜಮೀನೆಲ್ಲ ಪೂರ್ತಿಯಾಗಿ ಖಾಲಿಯಾದರೆ ಸಾಕಾಗಿದೆ. ಇವೊತ್ತು ಬೆಲ್ಲ ಮಾಡಬೇಕಾದರೆ ಬೆಲ್ಲಕ್ಕೂ ಬೆಲೆ ಇಲ್ಲ, ಜೊತೆಗೆ ಆಳುಗಳು ಸಿಗುವುದಿಲ್ಲ. ಈ ಬೆಲ್ಲವನ್ನು ತಯಾರು ಮಾಡಲು ಬೇಕಾದಂಥ ಸಲಕರಣೆಗಳು ಸಹ ಜನರಲ್ಲಿ ಇಲ್ಲ. ಹೀಗಾಗಿ ಸಾಕಷ್ಟು ತೊಂದರೆಯಾಗಿದೆ. ಮಾನ್ಯ ಸಕ್ಕರೆ ಸಚಿವರು ನಮ್ಮ ಬೆಳಗಾಂ ಜಿಲ್ಲೆಯ ಎಲ್ಲಾ ಶಾಸಕರುಗಳನ್ನು ಕರೆದುಕೊಂಡು ಹೋಗಿ ನಮ್ಮ ಸಮಕ್ಷಮ ಮುಖ್ಯಮಂತ್ರಿಗಳ ಜೊತೆಗೆ ಮಾತುಕತೆ ನಡೆಸಿ ಈ ರೈತರ ಸಮಸ್ಯೆಯನ್ನು ದೂರ ಮಾಡುತ್ತಾರೆ ಎಂದು ನಾನು ನಂಬಿದ್ದೇನೆ. ಅವರು ಈಗಾಗಲೇ ಹೋಗಿಬಂದಿದ್ದೇವೆ ಎಂದು ಹೇಳಿದರು ಆದರೆ ಇದುವರೆಗೂ ಸಹ ಪರಿಹಾರವೆ ಸಿಗಲಿಲ್ಲ. ಒಂದು ವೇಳೆ ಅವರು ಹೋಗಿ ಬಂದಿದ್ದಾರೆಯೊ ಅಥವಾ ಸುಮ್ಮನೆ ಸುಮ್ಮನೆ ಹೋಗಿಬಂದಿದ್ದೇವೆ ಎಂದು ಹೇಳುತ್ತಿದ್ದಾರೊ ಗೊತ್ತಾಗುತ್ತಿಲ್ಲ. ಆದ್ದರಿಂದ ನಮ್ಮೆಲ್ಲರ ಒಂದು ನಿಯೋಗವನ್ನು ಕರೆದುಕೊಂಡು

ಹೋಗಿ ಮಹಾರಾಷ್ಟ್ರ ಮುಖ್ಯಮಂತ್ರಿಗಳ ಜೊತೆ ಚರ್ಚೆಮಾಡಿ ಅದನ್ನು ಪರಿಹರಿಸಲು ತಾವು ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಸನ್ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ.

+ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಸನ್ಮಾನ್ಯ ಸಭಾಧ್ಯಕ್ಷರೆ, ಕಬ್ಬು ಬೆಳೆಗಾರರ ಸಮಸ್ಯೆ ಬಗ್ಗೆ ಸುದೀರ್ಘವಾದಂಥ ಚರ್ಚೆಯಾದಂಥ ಕಾಲದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳೂ ಸಹ ಈ ರೈತರ ಸಮಸ್ಯೆಯನ್ನು ಬಗೆಹರಿಸಬೇಕು ಎನ್ನುವಂಥ ಒಂದು ದೃಷ್ಟಿಯಿಂದ, ನಾನೂ ಸಹ ಮಹಾರಾಷ್ಟ್ರ ಸರ್ಕಾರದ ಮುಖ್ಯಮಂತ್ರಿಗಳನ್ನು ಭೇಟಿ ಮಾಡುವ ಸಲುವಾಗಿ, ನೀವೂ ಬಂದರೆ ಜೊತೆಗೆ ಹೋಗೋಣ ಎನ್ನುವಂಥ ಮಾತನ್ನು ಹೇಳಿದ್ದೆ. ಇದರಲ್ಲಿ ಯಾರು ಹೋಗಬಾರದು, ಯಾರು ಹೋಗಬೇಕು, ಇದರಲ್ಲಿ ರೈತನ ಉಳಿವಿನ ದೃಷ್ಟಿಯಿಂದ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದರು. ಆದರೆ ಅಲ್ಲಿ ಒಂದು ಬಿ.ಜೆ.ಪಿ. ಮತ್ತು ಶಿವಸೇನೆ ಸಮಿಶ್ರ ಸರ್ಕಾರ ಇದ್ದಕಾಲದಲ್ಲಿ ನಮ್ಮ ರೈತರ ಸಮಸ್ಯೆಗಳನ್ನ ಸರ್ಕಾರದ ಗಮನಕ್ಕೆ ತರುವಂತದ್ದು ನಮ್ಮ ಕರ್ತವ್ಯ ಎಂದು ತಿಳಿದುಗಕೊಂಡು ನಾನು ಮತ್ತು ತಂಗಾ ಹಾಗೂ ಸುಮಾರು 13 ಜನ ವಿಧಾನಸಭೆ / ವಿದಾನಪರಿಷತ್ತಿನ ಶಾಸಕರು 28ನೇ ತಾರೀಖಿನಂದು ಉಪಮುಖ್ಯಮಂತ್ರಿಗಳು, ಮುಖ್ಯಮಂತ್ರಿಗಳು ಮತ್ತು ಕೃಷಿ ಸಚಿವರು ಈ ಮೂರು ಜನರನ್ನ ಸಹ ಭೇಟಿ ಮಾಡಿ ಒಂದು ಮನವಿಯನ್ನು ಅವರಿಗೆ ಕೊಟ್ಟೆವು. ಅಲ್ಲಿ ಬಹಳ ವರ್ಷಗಳಿಂದ ಈ ಮಹಾರಾಷ್ಟ್ರ ಬಾರ್ಡರನಲ್ಲಿರುವಂಥ ಆ ಜಿಲ್ಲೆಯ ರೈತರು ನಿಮಗೆ ಕಬ್ಬನ್ನು ಕೊಡುತ್ತಿದ್ದಾರೆ ಮತ್ತೆ ಅದೇ ಆಧಾರದ ಮೇಲೆ ಆ ಒಂದು ಕಾರ್ಖಾನೆಗಳಲ್ಲಿ ಷೇರನ್ನು ಸಹ ನಮ್ಮ ಕರ್ನಾಟಕರಾಜ್ಯದ ರೈತರು ನಿಮ್ಮಲ್ಲಿ ಇಟ್ಟಿದ್ದಾರೆ. ನೀವು ಕಬ್ಬನ್ನ ಯಾವುದೊ ತುದಿಯಿಂದ ಇಲ್ಲಿಗೆ ತಂದುಕೊಡುವಂತದ್ದು ಸರಿಯಲ್ಲ. ಮತ್ತು ಬೆಳಗಾಂ ಜಿಲ್ಲಾಧಿಕಾರಿಗಳು ಕರೆದಂಥ ಸಭೆಯಲ್ಲಿ ಅಲ್ಲಿರುವಂಥ ಈ ಬ್ಯಾನನ್ನ ಲಿಫ್ಟ ಮಾಡಿದರೆ ನಾವು ಕಬ್ಬನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧರಿದ್ದೇವೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಪವರ್ ಪ್ರಾಬ್ಲಂನಿಂದ ಜಲಾಶಯಗಳಲ್ಲಿ ನೀರು ಇಲ್ಲದೇ ಇರುವುದರಿಂದ .....

ಹೆಚ್ಚು ದಿವಸ ಕಬ್ಬನ್ನು ತಡೆದು ನಿಮಗೆ ಕೊಡುವಷ್ಟು ಸಮಯ ಸಹ ಇಲ್ಲದೆ ಇರುವಂತಹ ಧಾರುಣ ಪರಿಸ್ಥಿತಿ ಇದೆ. ಅದಕ್ಕೋಸ್ಕರ ಈ ಬ್ಯಾನ್ ಅನ್ನು ಲಿಫ್ಟ್ ಮಾಡಿ, ಆ ಭಾಗದಲ್ಲಿ ಇರುವಂತಹ ಅಂದರೆ ಹೋದ ಸಾರಿ ತಾವು ಹದಿನೇಳುಲಕ್ಷದಿಂದ-ಹದಿನೇಳುವರೆ ಲಕ್ಷ ನಮ್ಮ ಬಾಗದ ಕಬ್ಬನ್ನು ಅರೆದಿದ್ದೀರಿ ಹಾಗೆಯೇ ಈ ಸಾರಿ ಕೂಡ ತಕ್ಷಣ ಹಾಗೆ ಅವಕಾಶವನ್ನು ಮಾಡಿಕೊಡದಿದ್ದರೆ ಆ ಬೆಳೆ ಸರ್ವನಾಶವಾಗುತ್ತದೆಂಬುದನ್ನು ಅವರಿಗೆ ಮನದಟ್ಟು ಮಾಡುವಂತಹ ಪ್ರಮಾಣಿಕ ಪ್ರಯತ್ನವನ್ನು ಮತ್ತು ಮನವಿಯನ್ನು ಮಾಡಿದೆವು. ಅವರೊಡನೆ ಮಾತುಕತೆಯು ತುಂಬಾ ಸೌಹಾರ್ದಯುತವಾಗಿತ್ತು. ನಾವು ಮತ್ತು ಕರ್ನಾಟಕದವರು ಅಣ್ಣತಮ್ಮಂದಿರಂತೆ ಸೌಹಾರ್ದಯುತವಾಗಿ ಕೆಲಸ ಮಾಡಿಕೊಂಡು ಬರುತ್ತಿದ್ದೇವೆ. ಯಡಿಯೂರಪ್ಪನವರೆ, "ನಿಮ್ಮ ಮುಖ್ಯಮಂತ್ರಿಗಳು ಪವರ್ ಪ್ರಾಬ್ಲಂ ಇದೆ ಎಂದು ಹೇಳಿದರು. ಈ ಪ್ರಾಬ್ಲಂ ನಮ್ಮಲ್ಲೂ ಇದ್ದರೂ ಸಹ ಇವತ್ತು ಪಕ್ಕದ ರಾಜ್ಯ ಪವರ್ ಪ್ರಾಬ್ಲಂ ಎದುರಿಸುವಂತಹ ಕಾಲದಲ್ಲಿ ಪವರ್ ಕೊಡುವುದು ನಮ್ಮ ಕರ್ತವ್ಯೆಂದು ಹೇಳಿ ನಾವು ವಿದ್ಯುತ್ ಸರಬರಾಜು ಮಾಡಲು ದಿಟ್ಟ ನಿರ್ಧಾರವನ್ನು ತೆಗೆದು ಕೊಂಡಿದ್ದೇವೆ. ನಮ್ಮಲ್ಲೂ ರಾಜಕೀಯ

ಗೊಂದಲಗಳು ಇವೆ. ಆದರೂ ಸಹ ಇನ್ನು ಮೂರು ದಿವಸಗಳ ಒಳಗೆ ಈ ಬ್ಯಾನ್ ಲಿಫ್ಟ್ ಮಾಡುತ್ತೇವೆನ್ನುವುದನ್ನು ಹೇಳಲಿಚ್ಛಿಸುವುದಿಲ್ಲ. ಆದರೆ ಆ ಭಾಗದ ರೈತರ ಉಳಿವಿನ ದೃಷ್ಟಿಯಿಂದ ಆ ಭಾಗದ ಕಬ್ಬನ್ನು ತರಿಸುವುದಕ್ಕೆ ಏನು ಅಗತ್ಯವಿದೆ ಅದನ್ನು ಆದಷ್ಟು ಬೇಗೆ ತೀರ್ಮಾನ ತೆಗೆದುಕೊಳ್ಳುತ್ತೇವೆಂದು" ಹೇಳಿದರು. ಹೀಗೆ ಮಾಡುತ್ತೇವೆಂಬ ಸಮಾಧಾನಕರವಾದಂತಹ ಉತ್ತರವನ್ನು ಅವರು ಕೊಟ್ಟರು. ನಮಗೆ ಆ ಒಂದು ಮಾತುಕತೆಯಿಂದ ಆ ಭಾಗದ ಬೆಳಗಾಂ, ಬೀದರ್, ಬಿಜಾಪುರ, ಆ ಭಾಗದ ಕಬ್ಬನ್ನು ನಿಶ್ಚಿತವಾಗಿ ತೆಗೆದುಕೊಳ್ಳುತ್ತಾರೆಂದು ಅನ್ನಿಸಿತು. ನಾನು ಹೇಳುವಂತಹ ಎರಡು ಸಂಗತಿಗಳೇನೆಂದರೆ ನನ್ನ ಕಡೆಯಿಂದಲೂ ಕೊರತೆಯಾಯಿತು. ಈ ಧಾರುಣ ಸ್ಥಿತಿ ಇದ್ದಂತಹ ಕಾಲದಲ್ಲಿ ಈಗ 27-28ನೇ ತಾರೀಖಿಗೆ ಹೋಗುವುದಕ್ಕೆ ಬದಲಾಗಿ ಇನ್ನು ಹದಿನೈದು ದಿವಸಗಳು ಅಥವಾ ಒಂದು ತಿಂಗಳು ಮೊದಲೆ ಹೋಗಿದಿದ್ದರೆ ಇದರ ಬಗ್ಗೆ ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳುತ್ತಿದ್ದರು. ಇದರಿಂದ ರೈತರಿಗೂ ಹೆಚ್ಚು ಲಾಭವಾಗುತ್ತಿತ್ತು. ನನ್ನ ಕಡೆಯಿಂದಲೂ ಕರ್ತವ್ಯ ಕೊರತೆ ಆಯಿತೇನೋ ಎಂದು ನಾನು ಪತ್ರಿಕಾ ಗೋಷ್ಠಿಯಲ್ಲೂ ಹೇಳಿದ್ದೇನೆ. ಅಲ್ಲಿರುವಂತಹ ಸದಸ್ಯರು ಎಲ್ಲಾ ಹೇಳಿದ್ದಾರೆ. ಈಗಲೂ ಸಹ ಮಾನ್ಯ ಮುಖ್ಯಮಂತ್ರಿಯವರು ಇನ್ನೊಂದು ನಿಯೋಗವನ್ನು ತೆಗೆದುಕೊಂಡು ಹೋಗಿ ಅವರಿಗೆ ಮನದಟ್ಟು ಮಾಡುವುದಾದರೆ ನಾನೂ ಸಹ ಬರಲು ಸಿದ್ಧನಿದ್ದೇನೆ. ಇದರಲ್ಲಿ ಪಕ್ಷ ಭೇಧ ಪ್ರಶ್ನೆಯೆ ಇಲ್ಲ.ಇದು ಇವತ್ತು ನಾಳೆ ಬಗೆಹರಿಸುವಂತಹ ಪ್ರಶ್ನೆಯಲ್ಲ. ಯಾವುದೊ ಕಾರಣಕ್ಕೆ ಹತ್ತಾರು ವರ್ಷಗಳಿಂದಲೂ ಬೆಳಗಾಂಗೆ ಕಬ್ಬನ್ನು ಕೊಡುತ್ತಾ ಇಲ್ಲ. ನಮ್ಮಲ್ಲೂ ಕಾರ್ಖನೆಗಳನ್ನು ತೆಗೆಯುವಂತಹ ಪ್ರಾಮಾಣಿಕವಾದಂತಹ ಪ್ರಯತ್ನ ತತಮ್ಮ ಕಡೆಯಿಂದ ಆಗಲಿಲ್ಲ. ಆ ಕಾರಣದಿಂದ ಇವತ್ತು ಇಪ್ಪತ್ತು ಲಕ್ಷ ಕಬ್ಬನ್ನು ಅವರು ತೆಗದುಕೊಂಡರೂ ಇನ್ನು 25-30 ಲಕ್ಷ ರೂ.ಗಳ ಕಬ್ಬು ಒಣಗುವಂತಹ ಧಾರುಣ ಪರಿಸ್ಥಿತಿ ಇದೆ. ಅದಕ್ಕೋಸ್ಕರ ರಾಜಕಾರಣ ಮಾಡದೆ ಈ ಸಮಯದಲ್ಲಿ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಸಂಬಂಧಪಟ್ಟವರನ್ನು ಕರೆದು ಹೆಚ್ಚು ಕಬ್ಬನ್ನು ಅರೆಯುವಂಥಾದ್ದನ್ನು ಇನ್ನು ಒಂದು ತಿಂಗಳಲ್ಲಿ ಹೆಚ್ಚು ಮಾಡಬೇಕೆಂದು ಕಾರ್ಖಾನೆಗಳಿಗೆ ಅಗ್ರಹಪೂರ್ವಕವಾಗಿ ಒತ್ತಾಯ ಮಾಡಿದ್ದಾರೆ. ಅವರೂ ಸಹ ಒಪ್ಪಿಕೊಂಡಿದ್ದಾರೆಂದು ಪತ್ರಿಕೆಗಳಲ್ಲಿ ಒತ್ತಾಯಿಸಿದ್ದಾರೆ. ನಾನು ಈ ಸಮಯದಲ್ಲಿ ಒಂದೇ ಒಂದು ವಿನಂತಿ ಮಾಡಿಕೊಳ್ಳೇತ್ತೇನೆ. ಇವತ್ತಿನ ದಿವಸ ರೈತನು ವಿಚಿತ್ರವಾದಂತ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಅದನ್ನು ಒಪ್ಪಿಕೊಂಡಿದ್ದಾರೆ. ದಯಮಾಡಿ ಜಲಾಶಯಗಳಿಂದ ನೀರನ್ನು ರೈತರಿಗೆ ಅವರು ಬೆಳೆದಂತಹ ಕಬ್ಬನ್ನು ಉಳಿಸುವಂಥಾದ್ದು, ಮತ್ತು ಬೋರವೆಲ್‌ಗಳಿಗೆ ವಿದ್ಯುತ್ತನ್ನು ಕೊಡಬೇಕು. ಅವರಿಗೆ ಇನ್ನು ಒಂದೆರಡು ತಿಂಗಳಲ್ಲಿ ಆ ಕಬ್ಬು ಒಣಗದಂತೆ ವ್ಯವಸ್ಥೆಯನ್ನು ಮಾಡಬೇಕು. ಇಷ್ಟೆಲ್ಲಾ ಮಾಡಿದ ಮೇಲೆ ಕಬ್ಬು ಉಳಿದರೆ, ಅವರು ಈಗ ವಿಶೇಷವಾಗಿ ಈ ವಿಚಿತ್ರ ಪರಿಸ್ಥಿತಿಯಲ್ಲಿ ಅವರು ಸಿಕ್ಕಿರುವುದರಿಂದ ಇನ್ನು ಒಂದೆರಡು ತಿಂಗಳು ಮುಂಚಿತವಾಗಿ ನಮ್ಮ ಕಬ್ಬಿನ ಕಾರ್ಖಾನೆಗಳು ತಮ್ಮ ಕೆಲಸವನ್ನು ಇನ್ನು ಮುಂಚೆ ಮಾಡಿದಿದ್ದರೆ ಇನ್ನು 25-30 ಲಕ್ಷ ಟನ್ ಕಬ್ಬನ್ನು ಅರೆಯಬಹುದಾಗಿತ್ತು. ಸತ್ಯಾಗ್ರಹ, ಚಳುವಳಿಗಳು, ಇನ್ನು ಅನೇಕ ರಿಪೇರಿ ಮಗದೊಂದು ಎಂದು ಹೇಳಿಕೊಂಡು ಪ್ರಾರಂಭಮಾಡಬೇಕಾಗಿದ್ದ ಕಾರ್ಖಾನೆಗಳು ಪ್ರಾರಂಭ ಮಾಡಲಿಲ್ಲ. ಅದಕ್ಕೆ

ಸೌಹಾರ್ದಯುತವಾದ ಮಾತುಕತೆಯೂ ಆಯಿತು. ಇನ್ನು ಒಂದೆರಡು ದಿವಸಗಳಲ್ಲಿ ಕಬ್ಬನ್ನು ಆ ಭಾಗಕ್ಕೆ ಕಳುಹಿಸುವಂತಹ ಕೆಲಸವನ್ನು ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಯವರು, ಮಾನ್ಯ ಉಪ ಮುಖ್ಯಮಂತ್ರಿಯವರು ಭರವಸೆಯನ್ನು ಕೊಟ್ಟಿದ್ದಾರೆ. ಇನ್ನು ಹೆಚ್ಚು ಆಗ್ರಹ ಮಾಡಿದರೆ ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಯವರು ಇನ್ನೊಂದು ನಿಯೋಗವನ್ನು ಕರೆದುಕೊಂಡು ಹೋಗಿ ಅವರನ್ನು ಭೇಟಿ ಮಾಡುವುದರಿಂದ ಇನ್ನು ಹೆಚ್ಚಿನ ಲಾಭವಾಗುತ್ತದೆ. ನಾವು ಈ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಯವರು ಮತ್ತು ನಾವೆಲ್ಲರೂ ಸೇರಿ ಇನ್ನು ಒಂದೆರಡು ತಿಂಗಳು ಮುಂಚೆಯೆ ಮಾಡಿದಿದ್ದರೆ ಬಹುಶಃ ಈ ಬ್ಯಾನ್ ಅನ್ನು ಲಿಫ್ಟ ಮಾಡಿ ಲಕ್ಷಾಂತರ ಕಬ್ಬನ್ನು ಅರೆಯಲು ವ್ಯವಸ್ಥೆ ಮಾಡಬಹುದಾಗಿತ್ತು. ನಮ್ಮ ಕಡೆಯಿಂದಲೂ ಕೊರತೆಯಾಗಿದೆ; ಎಂಬುದನ್ನು ನಾನು ಒಪ್ಪುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ನಿಯೋಗವನ್ನು ತೆಗೆದುಕೊಂಡು ಹೋದರೆ ನಾವು ಸಿದ್ದವಾಗಿದ್ದೇವೆ. ಅದರಿಂದ ಹೋರಾಟ ಮಾಡಿ ಆ ಕಬ್ಬನ್ನು ಅರೆಯುವಂತಹ ವ್ಯವಸ್ಥೆಯನ್ನು ಮಾಡೋಣ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಅವರು ಮಹಾರಾಷ್ಟ್ರದ ಮುಖ್ಯಮಂತ್ರಿಯವರು ಜೊತೆಯಲ್ಲಿ ಮತ್ತು ಉಪ ಮುಖ್ಯಮಂತ್ರಿಯವರ ಜೊತೆಯಲ್ಲಿ ಈಗಾಗಲೇ ಮಾತನಾಡಿದ್ದೇವೆ ಎಂಬುದಾಗಿ ಹೇಳಿದ್ದಾರೆ. ಅವರು ಕಬ್ಬನ್ನು ತೆಗೆದುಕೊಳ್ಳುವಂತಹ ಸಾಧ್ಯತೆ ಇದೆ, ನಮ್ಮ ರೈತರಿಗೆ ಅನುಕೂಲವಾಗುತ್ತದೆಂಬುದನ್ನು ಪ್ರಸ್ತಾಪ ಮಾಡಿದರು. ಇನ್ನು ಹದಿನೈದು ದಿವಸಗಳ ಮೊದಲೇ ಹೋಗಿದಿದ್ದರೆ ಈ ಸಮಸ್ಯೆಯನ್ನು ಬಗೆಹರಿಸಬಹುದಾಗಿತ್ತು ಎನ್ನುವಂತಹ ವಿಷಯವನ್ನು ಪ್ರಸ್ತಾಪ ಮಾಡಿದರು. ಬಹುಶಃ ಮಾನ್ಯ ಮುಖ್ಯಮಂತ್ರಿಯವರಿಗೆ ಗೊತ್ತಿದ್ದರೆ ಅವರು ಕಳುಹಿಸಬಹುದಾಗಿತ್ತು, ಏಕೆ ಡಿಲೆ ಮಾಡಿದರೋ ಗೊತ್ತಾಗಲಿಲ್ಲ. ಎರಡನೆಯದು ನನಗೆ ಅರ್ಥವಾಗುತ್ತಾ ಇಲ್ಲ. ಹತ್ತಾರು ವರ್ಷಗಳಿಂದ ನಮ್ಮ ಬೆಳಗಾಂ, ಬೀದರ್, ಬಿಜಾಪುರ, ಕಾರವಾರದ ರೈತರು ನೇರವಾಗಿ ಮಹಾರಾಷ್ಟ್ರದ ಸಕ್ಕರೆ ಫ್ಯಾಕ್ಟರಿಯವರಿಗೆ ಕೊಡುತ್ತಿದ್ದರು. ಆದರೆ ಈಗ ಬಿ.ಜೆ.ಪಿ. ಸರ್ಕಾರ ಬಂದಮೇಲೆ ಇವರು ಬಿ.ಜೆ.ಪಿ, ಶಿವಸೇನಾ ಸರ್ಕಾರ ಬಂದಮೇಲೆ ಈ ಪ್ರಶ್ನೆ ಏಕೆ ಉದ್ಭವವಾಯಿತು? ಏತಕ್ಕಾಗಿ ಇದನ್ನು ಬ್ಯಾನ್ ಮಾಡಿದರೆಂಬುದು ನಮಗೂ ಗೊತ್ತಾಗಬೇಕು. ಎಲ್ಲರೂ ಕೂಡ ರಾಜಕಾರಣ ದೃಷ್ಟಿಯಿಂದ ರೈತರ ಸಮಸ್ಯೆಯನ್ನು ನೋಡಬೇಕು, ಬಗೆಹರಿಸಬೇಕು ಎಂದರೆ ಬಹಳ ಕಷ್ಟವಾಗುತ್ತದೆ. ಇವತ್ತು ಸುದ್ದಿವದಿಂದ ಇವರು ವಿರೋಧಪಕ್ಷದ ನಾಯಕರು ಇದ್ದಾರೆ. ಹೋದ ಸಾರಿ ಚುನಾವಣೆಯಂತೆ ಒಬ್ಬರೂ ಬಿ.ಜೆ.ಪಿ.ಯವರು ಇಲ್ಲದಿದ್ದರೆ ನಮ್ಮಗತಿ ಹೇಗೆ ಇರುತ್ತಿತ್ತು? ಈಗ ಕನಿಷ್ಟ ಪಕ್ಷ ಬಿ.ಜೆ.ಪಿ. ಲೀಡರ್ ಇದ್ದ ಕಾರಣ ಅವರನ್ನು ಕರೆಯಿಸಿ ನೀವು ಬಂದಿದ್ದೀರಿ ಒಳ್ಳೆಯದಾಯಿತು. ಇನ್ನು 15 ದಿವಸಗಳು ಮುಂಚೆ ಬರಬೇಕಾಗಿತ್ತು. ಈ ಸಮಸ್ಯೆಯನ್ನು ಬಗೆಹರಿಸುತ್ತಿದ್ದೆ .....

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನನ್ನು ಕರೆಯಿಸಿದ್ದರು, 15 ದಿವಸ ಮುಂಚೆ ಬಂದಿದ್ದರೆ ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕರೆಸಿದ್ದಲ್ಲ,

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಈ ಪರಿಸ್ಥಿತಿ ಬರುವುದಕ್ಕೆ ಕಾರಣ, ಅಲ್ಲಿ ಆಡಳಿತ

ಪಕ್ಷದಲ್ಲಿ ಮುಖ್ಯಮಂತ್ರಿಯವರಾಗಿದ್ದ ಮಾನ್ಯ ಶರದ್ ಪವಾರ್‌ರವರು ಇದಕ್ಕೆ ಕಾರಣ, ರಾಜಕಾರಣ ಮಾಡಿ ನಾನು ಇದ್ದಾಗ ಕಬ್ಬನ್ನು ತೆಗೆದುಕೊಳ್ಳುತ್ತಾ ಇದ್ದೆ, ಈಗ ಬೇಡವೆಂದು ಹೇಳಿ ಅಲ್ಲಿ ಗೊಂದಲ ಮಾಡಿರುವುದರಿಂದ ಅಲ್ಲಿ ಈ ಒಂದು ಪರಿಸ್ಥಿತಿ ಉಂಟಾಗಿದೆ. ಈ ನಿಯೋಗದಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇರಬೇಕು. ಇದಕ್ಕೆ ಮೂಲ ಕಾರಣ ಜನತಾ ದಳ ಅಲ್ಲ, ಮಾನ್ಯ ದೇವೇಗೌಡರು ಅಲ್ಲ, ಕಾಂಗ್ರೆಸ್ ಸರ್ಕಾರದ ಕಿತಾಪತಿಯಿಂದ ಈ ಒಂದು ಪರಿಸ್ಥಿತಿ ಬಂದಿದೆ. ಇದಕ್ಕೆ ಮಾನ್ಯ ಶರದಪವಾರರವರನ್ನು ಕನ್ವಿನ್ಸ್ ಮಾಡೋಣ, ಮಾನ್ಯ ಮುಖ್ಯಮಂತ್ರಿಯವರನ್ನು ಕನ್ವಿನ್ಸ್ ಮಾಡೋಣ, ಎಲ್ಲರೂ ಒಟ್ಟಾರೆ ಸೇರಿ ರೈತರ ಸಮಸ್ಯೆಯನ್ನು ಬಗೆಹರಿಸೋಣ.

ಅಧ್ಯಕ್ಷರು : ಶರದ್ ಪವಾರ್‌ರವರು ಈಗ ಅಧಿಕಾರದಲ್ಲಿ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ನಾನು ಹೇಳುವುದೇನೆಂದರೆ, ಈಗ ಮಾನ್ಯ ಶರದಪವಾರ್‌ರವರು ಅಧಿಕಾರದಲ್ಲಿ ಇಲ್ಲ. ಈ ಮಾತನ್ನು ಈಗ ಕೊಡುತ್ತಾರೆನ್ನುವಂಥಾದ್ದು 15-20 ದಿವಸಗಳ ಮೊದಲು ಯಥಾಪ್ರಕಾರ ಕಬ್ಬು ಬರುತ್ತಾ ಇದೆಯೊ ಅದೇ ರೀತಿ ಅನುಕೂಲವನ್ನು ಮಾಡಿಕೊಟ್ಟಿದ್ದರೆ ಈ ಪ್ರಶ್ನೆ ಉದ್ಭವವಾಗುತ್ತಾ ಇರಲಿಲ್ಲ. ಅದಕ್ಕಾಗಿ ಏನು ತೊಂದರೆ ಇದೆ? ಯಾವ ರೀತಿ ಬ್ಯಾನ್ ಹಾಕಿದ್ದಾರೆ? ಯಾವ ರೀತಿ ರಿಲ್ಯಾಕ್ಸ್ ಮಾಡುತ್ತೇವೆಂದು ಹೇಳುತ್ತಿದ್ದಾರೆ? ಅದಕ್ಕಾಗಿ ತಾವು ಒಂದು ಸ್ಪಷ್ಟೀಕರಣವನ್ನು ಕೊಟ್ಟರೆ ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ಇದಕ್ಕೆ ಪ್ರತಿಯೊಂದಕ್ಕೂ ನಾವು ರಾಜಕಾರಣ ಬೆರೆಸಿಕೊಂಡು ಇವರು ಹೋದರೆ ಸಾಲ್ವ ಆಗುತ್ತದೆ; ಅವರು ಹೋದರೆ ಸಾಲ್ವ ಆಗುತ್ತದೆ ಎಂದರೆ ಹೇಗೆ? ಸರ್ಕಾರ ಅಂದ ಮೇಲೆ ಅವರು ಮಾತನಾಡಬೇಕು. ಅವರು ಮಾತನಾಡಲಿಲ್ಲವೆಂದರೆ ಅವರು ನೀತಿ ಏನು? ಅವರು ಏನು ರೈತರ ವಿರುದ್ಧ ಮಾಡುತ್ತಾರೆ? ಅವರು ಮಾಡುವಂಥದ್ದನ್ನು ದಯಮಾಡಿ ಸ್ಪಷ್ಟೀಕರಣ ಕೊಟ್ಟರೆ ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ನಾವು ಡೆಲಿಗೇಷನಗೆ ಎಂದು ಹೋದರೆ ನಾಳೆ ಮಾನ್ಯ ಶರದಪವಾರರವರು ಬಂದರೂ ಎಂದರೆ ನಾನು, ಬಿ.ಜೆ.ಪಿ.-ಶಿವಸೇನಾ ಬಂದರೆ ಅವರು ಹೋಗಬೇಕು, ಮತ್ತೊಂದು ಪಾರ್ಟಿ ಬಂತು ಎಂದರೆ ಇನ್ನೊಬ್ಬರು ಹೋಗಬೇಕೆಂದು ಹೀಗೆ ಆಗಬಾರದು. ಆದುದರಿಂದ ಸರ್ಕಾರದ ವತಿಯಿಂದ ಒಂದು ನಿಲುವನ್ನು ತೆಗೆದುಕೊಂಡು, ಯಾವ ರೀತಿಯಾಗಿ ರೈತರಿಗೆ ಸಹಾಯ ಮಾಡುತ್ತೀರಿ, ನೀವು ಯಾವ ರೀತಿ ಕನ್ವಿನ್ಸ್ ಮಾಡಿ ಯಾವ ರೀತಿ ನಿರ್ಣಯ ತೆಗೆದುಕೊಳ್ಳಬೇಕೆಂದು ಇದ್ದೀರಿ ಅದನ್ನು ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

+ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಇದರಲ್ಲಿ ನೆರೆಯ ರಾಜ್ಯವಾದಂತಹ ಮಹಾರಾಷ್ಟ್ರದ ಮುಖ್ಯಮಂತ್ರಿಗಳ ನಿಲುವಿನ ಬಗ್ಗೆ ತಪ್ಪು ಗ್ರಹಿಕೆ ಮಾಡಲು ಸಿದ್ದನಿಲ್ಲ. ನಮ್ಮ ರಾಜ್ಯ ವಿದ್ಯುತ್ ಅಭಾವದಿಂದ ತತ್ತರಿಸುವಂತಹ ಕಾಲದಲ್ಲಿ ನಾನು ಅವರನ್ನು ದೆಹಲಿಯಲ್ಲಿ, ಮುಂಬಯಿನಲ್ಲಿ ಎರಡು ಸಾರಿ ಭೇಟಿ ಮಾಡಿದ್ದೆ. ಈಗ ಪರ ಡೇ 2.5 ಮೀ. ಯೂನಿಟ್ ವಿದ್ಯುತ್ ಬರುತ್ತಾ ಇದೆ. ಇದಕ್ಕೆ ಸಹಕರಿಸಿದಂಥವರು ಕಬ್ಬನ್ನು ಅರೆಯಲಿಕ್ಕೆ ಸಹಕರಿಸಲು ಸಾಧ್ಯವಿಲ್ಲವೆಂದು ಅವರು ಹೇಳಿದ್ದಾರೆಂದು ನಾನು ಭಾವಿಸಿಕೊಳ್ಳುವುದಿಲ್ಲ. ಇದಕ್ಕೆ ನಾವು ರಾಜಕೀಯವನ್ನು ಮಿಶ್ರಣ

ಮಾಡುವುದು ಸರಿಯಲ್ಲವೆಂದು ನನ್ನ ಭಾವನೆಯಾಗಿದೆ. ಕಬ್ಬಿನ ಬೆಳೆಯ ವಿಷಯದಲ್ಲಿ ಸ್ವಲ್ಪಮಟ್ಟಿಗೆ ಈ ದೇಶದಲ್ಲಿ ಅತ್ಯಂತ ಸಂಕಷ್ಟದ ಪರಿಸ್ಥಿತಿ ಉಂಟಾಗಿದೆ. ಮಹಾರಾಷ್ಟ್ರದಲ್ಲಿ ಕೂಡ ಕಬ್ಬನ್ನು ಹೆಚ್ಚಿಗೆ ಬೆಳೆದಿದ್ದಾರೆ, ತಮಿಳುನಾಡಿನಲ್ಲಿಯೂ ಸಹ ಕಬ್ಬನ್ನು ಹೆಚ್ಚು ಬೆಳೆದಿದ್ದಾರೆ. ನಮ್ಮ ರಾಜ್ಯದ ಕಬ್ಬು ಬೆಳೆಗಾರರ ಸಂಘಟನೆ ಮತ್ತು ಕಬ್ಬನ್ನು ಅರೆಯುವ ಸಕ್ಕರೆ ಮಾಲಿಕರ ಪ್ರಭಾವ ತುಂಬಾ ಹೆಚ್ಚಾಗಿದೆ. ಈ ದೇಶದಲ್ಲಿ ಉತ್ತರ ಪ್ರದೇಶ, ಮಹಾರಾಷ್ಟ್ರ ಎರಡು ರಾಜ್ಯಗಳಲ್ಲಿ ಕಬ್ಬು ಬೆಳೆಗಾರರು ಇರಬಹುದು, ಅಥವಾ ಕಬ್ಬನ್ನು ಅರೆಯುವಂತಹ ಸಕ್ಕರೆ ಕಾರ್ಖಾನೆಯ ಮಾಲೀಕರು ಇರಬಹುದು ಇವರ ಪ್ರಭಾವ ಹೆಚ್ಚಿದೆ. ಅವರು ನಮ್ಮ ಕಡೆ ಇರುವಂಥ ಕಬ್ಬನ್ನು ಅರೆಯುವುದು ಬಿಟ್ಟು ಕರ್ನಾಟಕ ರಾಜ್ಯದ ಕಬ್ಬನ್ನು ಅರೆಯುವಂಥಾದ್ದಕ್ಕೆ ಅವಕಾಶವನ್ನು ಕೊಡಬಾರದೆಂಬ ಪ್ರತಿಭಟನೆ ಇದೆ. ಇದರಲ್ಲಿ ನಾನು ರಾಜಕೀಯ ಬೆರೆಸುವುದಕ್ಕೆ ಹೋಗುವುದಿಲ್ಲ. ಇದರ ಅವಶ್ಯಕತೆಯೂ ಇಲ್ಲ. ಇದು ಯಾರು ಮಾಡಿದರೂ, ಯಾರು ಬಿಟ್ಟರು, ಎಂದು ಅನಾವಶ್ಯಕವಾಗಿ ಈ ಸಭೆಯಲ್ಲಿ ಇಲ್ಲದ ಹೆಸರುಗಳನ್ನು ತೆಗೆದುಕೊಂಡು ಚರ್ಚೆ ಮಾಡುವಂತಹ ಅವಶ್ಯಕತೆ ಇಲ್ಲ. ಆದರೆ ಅಲ್ಲೂ ಕೂಡ ಸ್ವಾಭಾವಿಕವಾಗಿ ಎಲ್ಲರೂ ರಾಜಕಾರಣ ಮಾಡುವುದಕ್ಕೆ ಇರುವುದು. ರಾಜಕಾರಣ ಮಾಡದೆ ಇರುವುದಕ್ಕೆ ಸನ್ಯಾಸಿಗಳು ಅಲ್ಲ. ಅವರು ರಾಜಕಾರಣ ಮಾಡುತ್ತಾರೆ, ನಾವು ಕೂಡ ಮಾಡುತ್ತೇವೆ, ಮತ್ತೊಬ್ಬರು ಮಾಡುತ್ತಾರೆ.

11.30 ಎ.ಎಂ.

ಈಗ್ಗೆ ಒಂದು ತಿಂಗಳ ಹಿಂದೆ ಸಕ್ಕರೆ ಕಾರ್ಖಾನೆಯ ಮಾಲೀಕರ ಮತ್ತು ಕಬ್ಬು ಬೆಳೆಗಾರರ ಸಂಘಟನೆಯ ಒಂದು ದೊಡ್ಡ ಪ್ರತಿಭಟನಾ ಸಭೆಯಾಯಿತು. ಅದರ ನಾಯಕತ್ವವನ್ನು ಯಾರು ವಹಿಸಿದ್ದರು ಎನ್ನುವುದರ ಬದಲಾಗಿ ಪ್ರತಿಭಟನೆಯ ಸಭೆಯಾಯಿತು. ಸಭೆ ಆದ ಮೇಲೆ ರಾಜ್ಯ ಸರ್ಕಾರದ ಮೇಲೆ ತೀವ್ರತರವಾದ ಒತ್ತಡ ಬಂದಾಗ ಅವರು ನಿರ್ಬಂಧ ಹಾಕತಕ್ಕಂಥ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ನನಗೂ ಮಹಾರಾಷ್ಟ್ರದ ಮುಖ್ಯಮಂತ್ರಿಗಳಿಗೆ ನೆಡೆದಂಥ ಮಾತುಕತೆಯನ್ನು ನಾನು ಬಹಿರಂಗವಾಗಿ ಹೇಳಿಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ, ಯಾವಾಗಲೂ ರಾಜಕಾರಣದಲ್ಲಿ ಅವರು ಈಗ ಬಿಜೆಪಿಯಲ್ಲಿರಬಹುದು, ಯಾವುದೇ ಪಕ್ಷವಿರಲಿ, ನಾವು ಮಾತನಾಡುವಾಗ ಈ ವಿಷಯವನ್ನು ದಯವಿಟ್ಟು ಹೊರಗಡೆ ಹೇಳುವಂತಹ ಅವಶ್ಯಕತೆ ಇಲ್ಲವೆಂದು ಅವರು ಹೇಳಿದಾಗ, ನಾನು ಅದನ್ನು ಹೊರಗಡೆಗೆ ಹೇಳಿದಾಗ ವಚನಭ್ರಷ್ಟನಾಗುತ್ತೇನೆ, ನಾನು ಕೊಟ್ಟಂಥ ಮಾತನ್ನು ಉಳಿಸಿಕೊಳ್ಳದೆಯೇ ಲೋಪ ಮಾಡಿದ ಹಾಗೆ ಆಗುತ್ತದೆ. ಈಗ ಅದೆ ಪವಾರ್ ಬಗ್ಗೆ ನಾನೇ ನೇರವಾಗಿ ಹೇಳುತ್ತಿದ್ದೇನೆ, ಅವರು ನನಗೆ ಸಾಕಷ್ಟು ಸಹಕಾರವನ್ನು ಕೊಟ್ಟಿದ್ದಾರೆ. ದಯವಿಟ್ಟು, ಇದರ ಬಗ್ಗೆ ನೀವು ಈ ವಿಷಯವನ್ನು ಹೊರಗಡೆ ನನ್ನ ಹತ್ತಿರ ಹೇಳಿದಾಗಲೇ ಹೇಳಿದ್ದೇನೆ. ಆದರೆ ಯಡಿಯೂರಪ್ಪನವರು ಅವರು ತೀವ್ರತೆಯಿಂದ ಬಂದು....

ಶ್ರೀ ಬಿ.ಎಸ್.ಯಡಿಯೂರಪ್ಪ : ತಾವು ಎತ್ತಿದಾಗ ಅದನ್ನು ಹೇಳಿಬಿಟ್ಟಿರಿ.

ಶ್ರೀ ಹೆಚ್.ಡಿ. ದೇವೇಗೌಡ : ಇಲ್ಲ, ನಾನೇನು ಹೇಳಲಿಲ್ಲ, ನಾನು ನೇರವಾಗಿ ಹೇಳುತ್ತೇನೆ, ನಾನೇನು ಡಿಟೇಲ್ಸ್ ಹೇಳುತ್ತಾ ಹೋಗುತ್ತಿಲ್ಲ, ಆದರೆ ನಿನ್ನೆ ಅವರು ಏನು ಮಾಡಿದ್ದಾರೆಂದರೆ ಅತ್ಯಂತ

ಉತ್ಸಾಹದಲ್ಲಿ ಕೆಲವು ಮಾತುಗಳನ್ನು ಆಡಿದ್ದಾರೆ, ಅವರು ಹೋಗಿ ಬಂದಿದ್ದಕ್ಕೆ ಸಂತೋಷವಾಗಿದೆ, ಅದಕ್ಕೆ ನನ್ನದೇನೂ ವಿರೋಧವಿಲ್ಲ. ಅವರಿಗೂ ಕೆಲವು ಇಕ್ಕಟ್ಟುಗಳಿದ್ದಾವೆ. ಆದ್ದರಿಂದ ನಮ್ಮ ಚರ್ಚೆಯ ಫಲಿತಾಂಶವನ್ನು ನೀವು ದಯಮಾಡಿ ಪತ್ರಿಕೆಗಳಿಗೆ ಹೇಳಬೇಡಿ ಎಂದು ನನ್ನ ಹತ್ತಿರ ಹೇಳಿದ್ದಾರೆ. ಸದನದಲ್ಲೂ ನಾನು ಹೇಳಲಿಲ್ಲ, ಅವತ್ತು ಪತ್ರಿಕೆವರು ಬಂದು ಭೇಟಿಯಾದಾಗಲೂ ನಾನು ಹೇಳಲಿಲ್ಲ. ಏಕೆಂದರೆ, ಕೆಲವು ವಿಷಯಗಳಲ್ಲಿ ಅವರವರದೇ ಆದ ಬಿಕ್ಕಟ್ಟುಗಳಿವೆ, ರಾಜಕೀಯ ಬಿಕ್ಕಟ್ಟನ್ನು ನಾವು ಎದುರಿಸಬೇಕಾಗುತ್ತದೆ. ಈ ದೃಷ್ಟಿಯಿಂದ ನಾನು ಹೇಳಲಿಲ್ಲ. ಒಟ್ಟಾರೆ ಅವರು ಈಗ ಇರತಕ್ಕಂಥ ಪರಿಸ್ಥಿತಿಯಲ್ಲಿ ಸ್ವಲ್ಪ ಮಟ್ಟಿಗೆ ಕಾಂಗ್ರೆಸ್ಸಿನ ಫ್ಲೋರ್‌ಲೀಡರ್ ಕೂಡ ನಿರ್ಬಂಧ ತೆಗೆಯಿರಿ ಎಂದು ಹೇಳಿದ್ದಾರೆ. ಮೊನ್ನೆ ಈ ಸಭೆಯಲ್ಲಿ ಅವರ ಪತ್ರಿಕಾ ಹೇಳಿಕೆಯನ್ನು ಕೂಡ ಓದಿದೆ ಇತ್ತೀಚೆಗೆ ವಾತಾವರಣ ತಿಳಿಯಾಗುವುದಾದರೆ ತುಂಬಾ ಸಂತೋಷ. ಅವರಿಗೆ ಯಾವುದೇ ರಾಜಕೀಯ ಮುಜುಗರವಿಲ್ಲದೆ ಪವರಕೊಟ್ಟಂತಹವರು ನಮಗೆ ಇದನ್ನು ಕೊಡುವುದಕ್ಕೆ ಅಡ್ಡಿ ಮಾಡುತ್ತಾರೆಂದು ನಾನು ಅಂದುಕೊಳ್ಳುವುದಿಲ್ಲ. ಅಲ್ಲಿನ ಸನ್ನಿವೇಶ ಸ್ವಲ್ಪ ಮಟ್ಟಿಗೆ ಸುಧಾರಣೆಯಾಗಿ, ನಮ್ಮ ರಾಜ್ಯದ ರೈತರು ಬೆಳೆದಿರತಕ್ಕಂಥ ಕಬ್ಬನ್ನು ಅರೆಯುವುದಕ್ಕೆ ಅವರು ಸಹಕರಿಸಿದರೆ ರಾಜ್ಯದ ಕಬ್ಬುಬೆಳೆಗಾರರ ಪರವಾಗಿ, ಸದನದ ಎಲ್ಲಾ ಕಡೆಯ ಸದಸ್ಯರ ಪರವಾಗಿ ನಾನು ಮಹಾರಾಷ್ಟ್ರದ ಮುಖ್ಯಮಂತ್ರಿಗಳಿಗೆ, ಸರ್ಕಾರಕ್ಕೆ ಅಭಾರಿಯಾಗಿದ್ದೇನೆ, ಅವರನ್ನು ಅಭಿನಂದಿಸುತ್ತೇನೆ. ಇಷ್ಟಕ್ಕೆ ಮಾತ್ರ ಈ ವಿಷಯವನ್ನು ನಿಲ್ಲಿಸಿ ಮತ್ತೆ ಚರ್ಚೆ ಮಾಡುವುದರಿಂದ ಪ್ರಯೋಜನವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ಅಲ್ಲಿ ನಾನು ಮಾತನಾಡುವ ಸಮಯದಲ್ಲಿ ಗಮನಕ್ಕೆ ಬಂದ ಇನ್ನೊಂದು ಅಂಶವೇನೆಂದರೆ, ನೂರಾರು ಕೋಟಿ ರೂಪಾಯಿಗಳ ಸಕ್ಕರೆ ಇಲ್ಲಿಯ ಹಾಗೆ ಅಲ್ಲಿಯೂ ಕೂಡ ಕೊಳ್ಳುವವರಿಲ್ಲದೆ ಹಾಳಾಗುತ್ತಿದೆ. ಆ ಸರ್ಕಾರ ನೇರವಾಗಿ ಇಸ್ರೇಲ್‌ಗೆ ಹೋಗಿ, ಸಂಪರ್ಕ ಮಾಡಿ ಅವರ ಜೊತೆ ಮಾತುಕತೆ ನಡೆಸಿ ಸಕ್ಕರೆಯನ್ನು ನೇರವಾಗಿ ಇವರಿಂದ ಕೊಂಡುಕೊಳ್ಳುವುದಕ್ಕೆ ಒಪ್ಪಿಗೆಯಾಗಿದೆ, ಅವರು ಒಪ್ಪಿಕೊಂಡಿದ್ದಾರೆ. ಅದಕ್ಕೆ ಕೇಂದ್ರ ಸರ್ಕಾರದ ಅನುಮತಿಗೆ ಅವರು ಪ್ರಯತ್ನ ಮಾಡಿದ್ದಾರೆ, ಇನ್ನು ನಾಲ್ಕಾರು ದಿವಸಗಳಲ್ಲಿ ಅನುಮತಿ ಸಿಗುತ್ತದೆಂದು ಹೇಳುತ್ತಿದ್ದಾರೆ. ಅದೇ ಪರಿಸ್ಥಿತಿ ಇರುವ ಕರ್ನಾಟಕದವರು ನೀವು ಸಹ ಬೇರೆ ಯಾವುದಾದರೂ ದೇಶಕ್ಕೆ ಈ ಸಕ್ಕರೆಯನ್ನು ನೇರವಾಗಿ ಮಾರಾಟ ಮಾಡುವುದಕ್ಕೆ ಕೇಂದ್ರ ಸರ್ಕಾರದ ಅನುಮತಿಗೆ ಮಹಾರಾಷ್ಟ್ರದವರಂತೆ ಪ್ರಯತ್ನ ಮಾಡಿದರೆ ಈ ಸಮಸ್ಯೆ ಬಗೆಹರಿಯಬಹುದೇನೋ. ಆ ದಿಕ್ಕಿನಲ್ಲಿ ಸ್ವಲ್ಪ ಯೋಜನೆ ಮಾಡಿ ಎಂದು ನಾನು ಈಗ ಆ ಸಲಹೆಯನ್ನು ಕೊಟ್ಟೆ.

ಶ್ರೀ ಹೆಚ್.ಡಿ. ದೇವೇಗೌಡ : ನಾನು ಯಾವುದು ಹೆಚ್ಚಿಗೆ ವಿವರಣೆ ಕೊಡುವುದಕ್ಕೆ ಹೋಗಲಿಲ್ಲ. ಅಲ್ಲಿ ನೀವು ಒಂದೇ ಒಂದು ಸೂಕ್ಷ್ಮವಾಗಿ ನೀವು ತಿಳಿದುಕೊಳ್ಳಬೇಕಾಗುತ್ತದೆ. ಈಗ ಪಶ್ಚಿಮ ಮಹಾರಾಷ್ಟ್ರದಲ್ಲಿ ಬೆಳೆದಿರುವಂತಹ ಕಬ್ಬನ್ನು ಇಲ್ಲಿ ಚಿಕ್ಕೋಡಿ ಹತ್ತಿರಕ್ಕೆ ತರುವುದಕ್ಕೆ ಬರೀ ಲಾರಿ ಬಾಡಿಗೆಯನ್ನೇ ಮೂರು ಸಾವಿರ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಆದ್ದರಿಂದ ಈಗ ಕಬ್ಬೂ ಬರುತ್ತಿಲ್ಲ, ಅಲ್ಲಿ ಸರಪ್ಲಸ್ ಕಬ್ಬಿದೆ ಅಲ್ಲಿ. ನಮ್ಮ ಗಡಿಯಲ್ಲಿರುವ ಹನ್ನೆರಡು ಫ್ಯಾಕ್ಟ್ರಿಗೆ ಕಬ್ಬು ಬರುತ್ತಿಲ್ಲ,

ಇವರು ಸ್ಟಾರ್ಟ್ ಮಾಡುತ್ತಿದ್ದಾರೆ. ಕಬ್ಬಿಲ್ಲದೆ ಇಲ್ಲಿ ಕ್ರಷಿಂಗ್ ನಿಂತು ಹೋಗಿದೆ. ಒಂದು ಕಡೆ ಸಕ್ಕರೆ ಕಾರ್ಖಾನೆಗಳು ಕಬ್ಬನ್ನು ಅರಿಯುವುದಕ್ಕೆ ಆಗುತ್ತಿಲ್ಲ ಇನ್ನೊಂದು ಕಡೆ ಸರಪ್ಲಸ ಕಬ್ಬು ಇದ್ದು ಅದು ಒಣಗುತ್ತಿದೆ. ಒಂದು ಟ್ರಕ್‌ಗೆ ಎರಡೂವರೆ ಸಾವಿರ-ಮೂರು ಸಾವಿರ ರೂಪಾಯಿಗಳನ್ನು ಕೊಟ್ಟು ತರುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಬೇರೆ ಬೇರೆ ಕಾರಣಗಳಿವೆ - ಅಲ್ಲಿ ಸಬ್ಸಿಡಿ ಕೊಡಿ, ಮತ್ತೊಂದು ಕೊಡಿ ಹೀಗೆಲ್ಲಾ ಬೇರೆ ಬೇರೆ ಸಮಸ್ಯೆಗಳಿವೆ. ಆಮೇಲೆ ತಾವು ಇನ್ನೊಂದು ವಿಚಾರವನ್ನು ಹೇಳಿದಿರಿ, ನಮ್ಮಲ್ಲಿ ಏಳುನೂರು ಕೋಟಿ ರೂಪಾಯಿಗಳ ಸಕ್ಕರೆ ದಾಸ್ತಾನು ಇದೆ ಬೇರೆ ರಾಷ್ಟ್ರಗಳಿಗೆ ಅದನ್ನು ರಫ್ತು ಮಾಡುವುದಕ್ಕೆ ನೀವು ಪರವಾನಿಗೆ ಪಡೆದುಕೊಳ್ಳಿ ಪ್ರಯತ್ನ ಮಾಡಿ ಎಂದು ಹೇಳಿದಿರಿ. ಎಲ್ಲಾ ಪ್ರಯತ್ನ ಮಾಡಿದ್ದೇನೆ. ನಾನು ಇದನ್ನೆಲ್ಲಾ ಬಂದು ಪತ್ರಿಕೆಗಳಿಗೆ ಹೇಳಲಿಕ್ಕೆ ಹೋಗಲಿಲ್ಲ, ಪ್ರಚಾರಕ್ಕೆ ಹೋಗಲಿಲ್ಲ. ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳು ನನ್ನ ಜೊತೆ ಅಸಹಾಕಾರದಿಂದ ಏನು ನಡೆದುಕೊಳ್ಳುತ್ತಿಲ್ಲ, ಎಂದೇನೂ ಇಲ್ಲ. ನಾನು ಅದನ್ನು ನೇರವಾಗಿ ಹೇಳುತ್ತೇನೆ. ಹೋಗಿ ಚರ್ಚೆ ಮಾಡಿದ್ದೇನೆ, ಮೊನ್ನೆಯೂ ಕೂಡ ನಾನು, ಕೊನೆಯಪಕ್ಷ ನೀವು ನಮ್ಮಲ್ಲಿರತಕ್ಕಂಥ ಸಕ್ಕರೆಯಲ್ಲಿ ಶೇಕಡ ಇಪ್ಪತ್ತೈದರಷ್ಟನ್ನು ರಫ್ತು ಮಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳಿದೆ. ಅವರು ಅಲ್ಲಿ ಏನು ಹೇಳುತ್ತಾರೆಂದರೆ ಯಾರೋ ಎರಡು ಮೂರು ಕಂಪನಿಗಳೂ ನಮ್ಮ ಹತ್ತಿರ ಬಂದಿದ್ದವು. ಆದರೆ ನಾವು ನೇರವಾಗಿ ಪರವಾನಿಗೆ ಕೊಡುವುದಕ್ಕೆ ಅಧಿಕಾರವಿಲ್ಲ. ಕೇಂದ್ರ ಸರ್ಕಾರದ ಅನುಮತಿ ಬೇಕು, ಕೇಂದ್ರ ಸರ್ಕಾರಕ್ಕೆ ಹೋಗಿ ಅನುಮತಿಯನ್ನು ತೆಗೆದುಕೊಂಡು ಬನ್ನಿ ನಮ್ಮಲ್ಲಿ ಏಳುನೂರು ಕೋಟಿ ರೂಪಾಯಿಗಳ ಸಕ್ಕರೆ ದಾಸ್ತಾನು ಇದೆ. ನಾವು ಬಿಡುಗಡೆ ಮಾಡುವುದಕ್ಕೆ ನಮ್ಮದೇನು ತಕರಾರಿಲ್ಲ ಎಂದು ನಾನು ಹೇಳಿದೆ. ಸ್ವಾಮಿ, ನಮಗೆ ಲೆವಿ ಶುಗರ್ ಅನ್ನು ಬಿಡುಗಡೆ ಮಾಡುವುದಕ್ಕೆ ಅಧಿಕಾರವಿಲ್ಲ, ನಾನ್ ಲೇವಿ ಶುಗರ್ ಅನ್ನು ಬಿಡುಗಡೆ ಮಾಡುವುದಕ್ಕೆ ನಮಗೆ ಅಧಿಕಾರವಿಲ್ಲ. ಇದು ನಮಗೆ ಇರುವ ಪರಿಸ್ಥಿತಿ. ನಮ್ಮ ಹತ್ತಿರ ಯಾವ ಕಂಪನಿಗಳು ಬಂದಿದ್ದವೋ ಅವರು ಹೋಗಿ ಕೇಂದ್ರ ಸರ್ಕಾರವನ್ನು ಅಪ್ರೋಚ್ ಮಾಡಿದ್ದಾರೆ. ನಾನು ಕೇಂದ್ರ ಸರ್ಕಾರದವರ ಜೊತೆ ದೂರವಾಣಿ ಮುಖಾಂತರ ಮಾತನಾಡಿದ್ದೇನೆ, ಸ್ವತಃ ಕೇಂದ್ರ ಆಹಾರ ಮಂತ್ರಿಗಳಾದ ಅಜಿತಸಿಂಗ್‌ರವರನ್ನು ಭೇಟಿ ಮಾಡಿ ಮಾತನಾಡಿದೆ. ನೀವು ಯಾವ ಷರತ್ತಿನ ಮೇಲಾದರೂ ಸಕ್ಕರೆಯನ್ನು ರಫ್ತು ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಹೇಳಿದ್ದೇನೆ. ಅದನ್ನು ಅಲ್ಲಿಗೆ ನಿಲ್ಲಿಸುತ್ತೇನೆ, ಅಲ್ಲಿ ಇನ್ನೊಂದು ಬೇರೆ ಶುಗರ್ ಫೆಡರೇಷನ್ ಇದೆ, ಅವರ ಮುಖೇನ ಆಗಬೇಕು, ನಾವು ಮಾಡುವುದಕ್ಕಾಗುವುದಿಲ್ಲ. ಅವರು ಇಡೀ ರಾಷ್ಟ್ರದ ಒಟ್ಟು ಸಕ್ಕರೆಯನ್ನು ಬೇರೆ ದೇಶಗಳಿಗೆ ಕಳುಹಿಸತಕ್ಕಂಥ ಫೆಡರೇಷನ್ ಇದೆ, ಹೀಗೆ ಅವರು ಅವರದೇ ಆದ ನಿಮಯಗಳು ನೀತಿಗಳನ್ನೆಲ್ಲಾ ಹೇಳಿದರು. ಅದರ ಬಗ್ಗೆ ನಾನು ಈಗ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ, ಹೋದರೆ ಮುಂದಕ್ಕೆ ಹೋಗಬೇಕಾಗುತ್ತದೆ ಅದನ್ನು ಇಲ್ಲಿಗೆ ನಾನು ನಿಲ್ಲಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಷಯವನ್ನು ನಾನು ಹೇಳುತ್ತೇನೆ. ಒಂದೇ ಒಂದು ವಿಷಯವನ್ನು ಎರಡು ನಿಮಿಷಗಳಲ್ಲಿ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನೀವು ಗಡಿಯಾರದ ಕಡೆ ನೋಡಿದಿರಿ ನಾನು ಅರ್ಥ ಮಾಡಿಕೊಳ್ಳಬಲ್ಲೆ, ಇಲ್ಲ I have also to see the feelings of the Chair... ನಾವು ಮೊನ್ನೆ ಎಲ್ಲಾ ಸಕ್ಕರೆ ಕಾರ್ಖಾನೆಯ ಮಾಲೀಕರನ್ನು ಕರೆಯಿಸಿದ್ದೆ, ಅವರ ಹತ್ತಿರ ಕುಳಿತುಕೊಂಡು ಚರ್ಚೆ

ಮಾಡಿದ್ದೇನೆ. ನಮ್ಮಲ್ಲಿ ಈಗ ಏನು ಕಟ್‌ಆಫ್ ಡೇಟ್ ಇದೆಯೋ ಆ ರೀತಿ ಅವರು ಅರೆಯುವುದಕ್ಕೆ, ಕೆಲವು ಫ್ಯಾಕ್ಟರಿಗೆ ಮಾರ್ಚ್ ಮೂವತ್ತು ಇದೆ. ಕೆಲವು ಶುಗರ್ ಫ್ಯಾಕ್ಟರಿಗಳಿಗೆ ಏಪ್ರಿಲ್ ಹದಿನೈದಕ್ಕೆ ಬರುತ್ತದೆ. ಇನ್ನು ಕೆಲವು ಶುಗರ್ ಫ್ಯಾಕ್ಟರಿಗಳಿಗೆ ಮೇ ಒಂದನೇ ತಾರೀಖಿನವರೆಗೆ ಇಲ್ಲಿ ಕರ್ನಾಟಕದಲ್ಲಿ ಅರೆಯುವುದಕ್ಕೆ ಮೂರು ಜೋನ್ ಮಾಡಿಕೊಂಡಿದ್ದಾರೆ. ಅವರು ಏನು ಹೇಳಿದ್ದಾರೆಂದರೆ, ಅಷ್ಟರೊಳಗೆ ಎಷ್ಟು ಸಾಧ್ಯವೋ ಅಷ್ಟನ್ನು ಅರೆಯುತ್ತೇವೆ ಎಂದು ಹೇಳಿದರು. ನಾವು ಟೊಟೆಲ್ ಅಸೆಸ್‌ಮೆಂಟ್ ಮಾಡಿರುವ ಪ್ರಕಾರ ಇನ್ನು ಹದಿನೈದರಿಂದ ಇಪ್ಪತ್ತು ಲಕ್ಷ ಟನ್ ಕಬ್ಬು ಮಾತ್ರ ಉಳಿಯಬಹುದು, ಅದಕ್ಕೆ ಒಂದು ತಿಂಗಳು ಎಕಸ್ಟಾ ಅರೆಯುವುದಕ್ಕೆ ಅವಕಾಶ ಮಾಡಿಕೊಡಿ ಎಂದು ನಾನು ಕೇಳಿದ್ದೇನೆ, ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ಆದರೆ ಒಂದೇ ಒಂದು ಇಳುವರಿ ಕಡಿಮೆಯಾಗುತ್ತದೆ, ಇಳುವರಿ ಕಡಿಮೆಯಾಗುವುದರಿಂದ ನಮಗೆ ನಷ್ಟವಾಗುತ್ತದೆ ದಯಮಾಡಿ, ಸರ್ಕಾರ ಅದಕ್ಕೇನಾದರೂ ಸ್ವಲ್ಪ ರಿಯಾಯಿತಿ ಕೊಡಬೇಕೆಂದು ಹೇಳಿದರು. ಈಗಾಗಲೇ ಈ ವರ್ಷ ಮೊದಲನೆ ಬಾರಿಗೆ ಸುಮಾರು ಇಪ್ಪತ್ತೆರಡು ಕೋಟಿ ರೂಪಾಯಿಗಳ ರಿಯಾಯಿತಿಯನ್ನು ಕೊಟ್ಟಿದ್ದೇವೆ. ಬಹುಶಃ ಇಂತಹ ಸನ್ನಿವೇಶ ಹಿಂದೆಂದೂ ಆಗಿದ್ದಲ್ಲ ಮತ್ತೆ ಕೂಡ ಹೇಳಿದ್ದೇವೆ, ಆ ಒಂದು ತಿಂಗಳ ಎಕಸ್ಟಾ ಅರೆಯತಕ್ಕ ಕಾಲದಲ್ಲಿ ನಾನು ಪರ್ಚೇಸ್ ಟ್ಯಾಕ್ಸ್ ಅನ್ನು ರಿಡಕ್ಷನ್ ಮಾಡುವುದಕ್ಕೆ ಸರ್ಕಾರದ ಅಧಿಕಾರಿಗಳ ಜೊತೆ ಈಗಾಗಲೇ ಚರ್ಚೆ ಮಾಡಿದ್ದೇನೆ. ಇನ್ನು ಒಂದೆರಡು ದಿನಗಳಲ್ಲಿ ನಿರ್ಣಯ ತೆಗೆದುಕೊಂಡು ಈ ಸದನದಲ್ಲಿ ಪ್ರಕಟಣೆ ಮಾಡುತ್ತೇನೆ. ಆ ಆಶ್ವಾಸನೆಯಿಂದ ಅವರು ಒಂದು ತಿಂಗಳಲ್ಲಿ extra ಅರೆದು ಇಡೀ ಹದಿನೆಂಟರಿಂದ ಇಪ್ಪತ್ತು ಲಕ್ಷ ಟನ್ ಕಬ್ಬು ಏನು ಎಕಸ್ಟಾ ಉಳಿಯುತ್ತದೋ ಅದನ್ನು ನಾವು ಅರೆದು ಕೊಡುತ್ತೇವೆಂದು ಹೇಳಿದ್ದಾರೆ. ಇಷ್ಟನ್ನು ನಾನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ.

ಅಧ್ಯಕ್ಷರು : ಪುಟ್ಟಣ್ಣಯ್ಯನವರು, ತಾವು ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅನುಮತಿಯನ್ನು ಕೇಳಿದಿರಿ, ಇನ್ನೊಂದು ಐದು ನಿಮಿಷವಿದೆ, ಅಲ್ಲಿಗೆ ತಾವು ಒಂದು ಗಂಟೆಯನ್ನು ಪೂರ್ಣ ಉಪಯೋಗಿಸಿಕೊಂಡಂತೆ ಆಗುತ್ತದೆ, ಸಂಕ್ಷಿಪ್ತವಾಗಿ ಪ್ರಸ್ತಾಪ ಮಾಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸಭಾ ನಾಯಕರು ಕಬ್ಬಿನ ಸಮಸ್ಯೆಯ ಬಗ್ಗೆ ಮಾತನಾಡುತ್ತಾ ಬೆಳಗಾಂ...

ಅಧ್ಯಕ್ಷರು : ತಾವು ಕಬ್ಬಿನ ಬೆಳೆಯ ಬಗ್ಗೆ ಪ್ರಸ್ತಾಪ ಮಾಡುತ್ತೀರೋ ಅಥವಾ ಬೇರೆ ಇನ್ನೊಂದು...

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಒಂದೇ ಒಂದು ನಿಮಿಷದಲ್ಲಿ ಹೇಳಿಬಿಡುತ್ತೇನೆ.

ಅಧ್ಯಕ್ಷರು : ಇಲ್ಲ, ಅದು ಕಷ್ಟವಾಗುತ್ತದೆ, ತಾವು ಯಾವುದೋ ಇನ್ನೊಂದು ವಿಚಾರ ಹೇಳಿದಿರಿ.

ಈ) ವೃತ್ತಿಶಿಕ್ಷಣ ನೌಕರರಿಂದ ಸತ್ಯಾಗ್ರಹ.

+ ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಆಯಿತು ಸಾರ್. ಏಕೆಂದರೆ ಪತ್ರಿಕೆಯನ್ನು ಓದುವುದರ ಮೂಲಕ ಮಹಾರಾಷ್ಟ್ರದ ಸರ್ಕಾರ ಅಲ್ಲಿರತಕ್ಕಂಥ ಕಬ್ಬು ಮುಗಿದ ಮೇಲೆ, ಮುಕ್ತಾಯವಾದ ಮೇಲೆ ನಮ್ಮ ಕಬ್ಬನ್ನು ಅರೆಯುವಂಥ ಒಂದು ಆಲೋಚನೆ ಮಾಡಿರುವುದರಿಂದ ಈಗ ತತ್‌ಕ್ಷಣದಲ್ಲಿ